ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ಸಂಖ್ಯೆ:ಬಿಬಿಎಂಪಿ/ಮು.ಅ./ದಾ.ವ/ತಾ.ಮ/36/2014-15

ಮುಖ್ಯ ಅಭಿಯಂತರವರ ಕಛೇರಿ,
ದಾಸರಹಳ್ಳಿ ವಲಯ,
ದಿನಾಂಕ: 20.05.2014.

ತಾಂತ್ರಿಕ ಮಂಜೂರಾತಿ

ಕಾಮಗಾರಿಯ ಹೆಸರು: Re-Asphalting cross roads & Re-Construction of at drains at Kirloskar layout in ward no.14

ಅಂದಾಜು ಮೊತ್ತ ರೂ: **45.00** ಲಕ್ಷಗಳು.

ಜಾಬ್‌ಕೋಡ್ ಸಂಖ್ಯೆ: 014-14-000049 P-code – P-2654

ಉಲ್ಲೇಖ ಸಂಖ್ಯೆ:
1. ಮಾನ್ಯ ಆಯುಕ್ತರವರು ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಕಛೇರಿ ಆದೇಶ (**ತಿದ್ದುಪಡಿ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳು**) ಪತ್ರಸಂಖ್ಯೆ:ಬಿ12(1)ಪಿಆರ್/394/11-12, ದಿ:28.09.2013
2. ಮಾನ್ಯ ಅಪರ ಆಯುಕ್ತರು, (ದಾಸರಹಳ್ಳಿ ವಲಯ) ರವರ ಅಡಳಿತಾತ್ಮಕ ಮಂಜೂರಾತಿ ಸಂಖ್ಯೆ: ಅ.ಆ/ದಾ.ವ/ಆ.ಮ/890/2014-15, ದಿನಾಂಕ:04.03.2014,

****

ಈ ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗರವರು ತಾಂತ್ರಿಕ ಮಂಜೂರಾತಿಯನ್ನು ಕೋರಿರುವ ಮೇರೆಗೆ, ಉಲ್ಲೇಖ (2) ರಲ್ಲಿ ಅಪರ ಆಯುಕ್ತರು (ದಾಸರಹಳ್ಳಿ) ವಲಯ ರವರು ಸದರಿ ಕಾಮಗಾರಿಗೆ 2013-14ನೇ ಸಾಲಿನ ದರ ಪಟ್ಟಿಯಂತೆ ಅಂದಾಜು ಮೊತ್ತ ರೂ.**45.00** ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ ಮತ್ತು ತಾಂತ್ರಿಕ ಮಂಜೂರಾತಿಯ ಪುಸ್ತಕದ ಪುಟ ಸಂಖ್ಯೆ:68 ಕ್ರಮ ಸಂಖ್ಯೆ:36 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1 ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.

2 ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೋದನೆ ಪಡೆಯುವುದು.

3 ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.

4 ರಸ್ತೆ ಇತಿಹಾಸ ಪುಸ್ತಕದಲ್ಲಿ ಸದರಿ ಕಾಮಗಾರಿಯಲ್ಲಿನ ವಿವಿಧ ಕೆಲಸಗಳ ವಿವರಗಳನ್ನು ನಮೂದಿಸುವುದು.

ಮುಖ್ಯ ಅಭಿಯಂತರರು,
ದಾಸರಹಳ್ಳಿ ವಲಯ,
ಬಿಬಿಎಂಪಿ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:-

1 ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ, ರವರಿಗೆ ಮೂಲ ಅಂದಾಜು ಪಟ್ಟಿಯೊಂದಿಗೆ ಮುಂದಿನ ಕ್ರಮಕ್ಕಾಗಿ.

2 ಸಹಾಯಕ ಹಣಕಾಸು ನಿಯಂತ್ರಕರು, ದಾಸರಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

3 ಕಛೇರಿ ಪ್ರತಿ.